Lakshmi Devi Baare

ಲಕ್ಷ್ಮಿದೇವಿ ಬಾರೆ ಮಾತೆ ಪೂಜಿಸುವೆನು
ನಿನ್ನ ಪಾದಗಳಿಗೆ ನಾನು ವಂದಿಸುವೆನು ॥

ಪುನುಗು ಜಾಜಿ ಕುಂಕುಮ ಕೇಸರಿ ಗಂಧ ಕಸ್ತುರೀ
ನಾನಾ ಜಾತಿ ಗಂಧಗಳಿಂದ ಪೂಜಿಸುವೆನು ॥೧॥

ಮರುಗ ಮಲ್ಲಿಗೆ ಸುರಗಿ ಸಂಪಿಗೆ ಪಾದರಿ ಪುಷ್ಪ
ನಾನಾ ಜಾತಿ ಪುಷ್ಪಗಳಿಂದ ಅರ್ಚಿಸುವೆನು ॥೨॥

ಕದಳಿ ದಾಳಿಂಬ ನಿಂಬೆ ನೇರಳೆ ಚೂತಫಲಗಳು
ನಾನಾ ಜಾತಿ ಫಲಗಳನ್ನು ಅರ್ಪಿಸುವೆನು ॥೩॥

ಮುತ್ತಿನಾರತಿ ಎತ್ತಿ ಬೆಳಗುವೆ ಭಕ್ತಿಯಿಂದಲಿ
ಬೇಗದಿಂದ ವರವ ಕೊಟ್ಟು ಹರಸು ತಾಯಿ ನೀ ॥೪॥

raaga: shaMkaraabharaNa tALa: chaapu

lakShmidEvi baare maate pUjisuvenu
ninna paadagaLige naanu vaMdisuvenu ||

punugu jaaji kuMkuma kEsari gaMdha kasturI
naanaa jaati gaMdhagaLiMda pUjisuvenu ||1||

maruga mallige suragi saMpige paadari puShpa
naanaa jaati puShpagaLiMda arcisuvenu ||2||

kadaLi daaLiMba niMbe nEraLe cUtaphalagaLu
naanaa jaati phalagaLannu arpisuvenu ||3||

muttinaarati etti beLaguve bhaktiyiMdali
bEgadiMda varava koTTu harasu taaye nI ||4||